ಕರ್ನಾಟಕ ವಿಧಾನ ಸಭೆ

ಶುಕ್ರವಾರ 28ನೇ ಫೆಬ್ರವರಿ 1992

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11.05 ಗಂಟೆಗೆ ಸಮಾವೇಶಗೊಂಡಿತು.
[ಅಧ್ಯಕ್ಷರು (ಶ್ರೀ. ಎಸ್.ಎಂ.ಕೃಷ್ಣ ಅವರು) ಪೀಠವನ್ನು ಅಲಂಕರಿಸಿದ್ದರು.]

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಅಧ್ಯಕ್ಷರು:- ಶ್ರೀ ರಾಜುಗೌಡ ಅವರೇ ತಾವುಗಳು ಕೇಳಿದ ಪ್ರಶ್ನೆಗೆ ಸರ್ಕಾರದವರು 15 ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಜಿ. ರಾಜುಗೌಡ:- ನಾನು ಕೇಳಿದ್ದುದು ಜನರಲ್ ಕ್ವಶ್ಚನ್. ರಾಜ್ಯದಲ್ಲಿ ಒಟ್ಟು ಎಷ್ಟು ದೇವದಾಸಿಯರು ಇದ್ದಾರೆ ಎಂಬುದು ತಿಳಿದು ಬಂದಿದೆ. ಒಟ್ಟು 20 ಸಾವಿರ ಜನರು ಇರಬಹುದು. ಆದ್ದರಿಂದ ಜನರಲ್ ಆಗಿ ನಾನು ಕೇಳುವ ಪ್ರಶ್ನೆಗೆ ಉತ್ತರ ಕೊಟ್ಟರೆ ಸಾಕು.

ಶ್ರೀ ಬಿ. ಶಿವಣ್ಣ:- ಅವರ ಜನರಲ್ ಕ್ವಶ್ಚನ್‌ಗೆ ನಾನು ಉತ್ತರ ಕೊಡುತ್ತೇನೆ. ಬೇರೆ ವಿಚಾರಗಳಿಗೆ ಅವರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು:- ಅವರಿಗೆ ದೇವದಾಸಿಯರ ಹೆಸರು ಕೇಳಿದರೆ ಕೊಡುವುದಕ್ಕೆ ಆಗುವುದಿಲ್ಲ, ನೀವು ಜನರಲ್ ಕ್ವಶ್ಚನ್ ಕೇಳಿದರೆ ಹೇಳುತ್ತಾರೆ.

ಶ್ರೀ ಜಿ. ರಾಜುಗೌಡ:- ರಾಜ್ಯದಲ್ಲಿರುವ ಸುಮಾರು 20 ಸಾವಿರ ದೇವದಾಸಿಯರಿಗೆ ಸರಕಾರದವರು ಕೆಲವೊಂದು ಆರ್ಥಿಕ ಕಾರ್ಯಕ್ರಮಗಳ ಮುಖಾಂತರ ಈ ಒಂದು ಕೆಟ್ಟ ಚಾಳಿಯನ್ನು ತಪ್ಪಿಸಬೇಕೆಂದು ಹಾಕಿಕೊಂಡಿದ್ದಾರೆ. ಈ ಕಾರ್ಯಕ್ರಮಗಳಿಂದಾಗಿ ಅವರು ಆರ್ಥಿಕವಾಗಿ ಮುಂದೆ ಬಂದಿದ್ದರೂ ಕೂಡ ಅವರಲ್ಲಿ ಅನೂಚಾನವಾಗಿ ಬಂದಿರತಕ್ಕಂಥ ಈ ಕೆಟ್ಟ ಚಾಳಿಯನ್ನು ತಪ್ಪಿಸಲು ಸಾಧ್ಯವಾಗಿಲ್ಲ. ಆದ್ದರಿಂದ ವಿಶೇಷತಃ ಈ ಕನ್ಯೆಯರಿಗೆ ಗಂಡು ಗೊತ್ತು ಮಾಡಿ ಶುಭಲಗ್ನ ಮಾಡುವುದು, ಅಂಥ ಒಂದು ವ್ಯವಸ್ಥೆಯ ಮೂಲಕ ಲಗ್ನವಾದ ವರನಿಗೆ ಸರಕಾರದಿಂದ ಪ್ರೋತ್ಸಾಹವನ್ನು ಕೊಡುವುದು, ಉದ್ಯೋಗ ಕೊಡುವ ವಿಷಯದಲ್ಲಿ ಅವರನ್ನು ಸ್ಪೆಶಲ್ ಗ್ರೂಪ್ ಎಂದು ಮಾಡಿ ಎಬಿಸಿಡಿ ಎಂದು ಮಾಡಿ ಅವರಿಗೆ ಉದ್ಯೋಗದಲ್ಲಿ ಮೀಸಲು ಕೊಡುವುದು ಮುಂತಾದ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಮಾತ್ರ ಅವರ ಈ ಕೆಟ್ಟ ಚಾಳಿಯನ್ನು ತಪ್ಪಿಸಲು ಸಾಧ್ಯವಾಗುತ್ತದೆ.

ಅಧ್ಯಕ್ಷರು:- ಶ್ರೀ ರಾಜುಗೌಡರೇ, ನಿಮ್ಮ ಪ್ರಶ್ನೆಗೆ 15 ದಿವಸ ಕಾಲಾವಕಾಶಬೇಕೆಂದು ಕೇಳಿದ್ದಾರೆ.

ಶ್ರೀ ಜಿ. ರಾಜುಗೌಡ:- ದೇವದಾಸಿಯವರು ಎಷ್ಟು ಜನ ಇದ್ದಾರೆ ಎಂಬುದು ಬೇಡ ಸ್ವಾಮಿ. ನಾನು ಕೇಳುವುದಕ್ಕೆ ಉತ್ತರ ಕೊಟ್ಟರೆ ಸಾಕು. 22 ಸಾವಿರ ಮಂದಿ ಇದ್ದಾರೆ ಎಂದು ತಿಳಿದುಬಂದಿದೆ.

ಶ್ರೀ ಬಿ. ಶಿವಣ್ಣ:- ಜನರಲ್ ಪ್ರಶ್ನೆಗೆ ಉತ್ತರ ಕೇಳಿದರೆ ಕೊಡುತ್ತೇನೆ.

ಅಧ್ಯಕ್ಷರು:- ಅಷ್ಟೂ ದೇವದಾಸಿಯರ ಹೆಸರು ಕೇಳಿದರೆ ನೀವು ಕೊಡೋಕಾಗುಲ್ಲ.

ಪ್ರಶ್ನೆ ಸಂಖ್ಯೆ: 81(533)

ಶ್ರೀ ಜಿ. ರಾಜುಗೌಡ:- ಈಗ ರಾಜ್ಯದಲ್ಲಿರುವ 22 ಸಾವಿರ ದೇವದಾಸಿಯರಿಗೆ ಇವರು ಕೆಲವು ಆರ್ಥಿಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳ ಮೂಲಕ ಈ ಕೆಟ್ಟ ಪದ್ಧತಿ ನಿಲ್ಲಿಸಬೇಕೆಂದು ಸರ್ಕಾರ ಹೊರಟಿದೆ. ಇವರು ಹಾಕಿಕೊಂಡಿರುವ ಕಾರ್ಯಕ್ರಮಗಳಲ್ಲಿ ಆರ್ಥಿಕವಾಗಿ ಅವರು ಮುಂದುವರಿದರೂ ಸಹ ಅನೂಚಾನವಾಗಿ ಬಂದಿರುವ ಈ ಕೆಟ್ಟ ಚಾಳಿಯನ್ನು ತಪ್ಪಿಸೋದಿಕ್ಕೆ ಸಾಧ್ಯವಿಲ್ಲ. ನನ್ನ ಸಲಹೆ ಏನೆಂದರೆ ಯಲ್ಲಮ್ಮ ಅನ್ನುವವಳು ಒಬ್ಬ ಕನ್ಯೆ, ಅವಳಿಗೆ ಒಂದು ಗಂಡು ದೇವರನ್ನು ತಂದು ಲಗ್ನ ಮಾಡಿ ಮತ್ತು ಪ್ರತಿವರ್ಷ ಕೂಡ ಸಾಮೂಹಿಕವಾಗಿ 5 ಸಾವಿರ ಜನಕ್ಕೆ ಲಗ್ನ ಮಾಡುವ ವ್ಯವಸ್ಥೆ ಮಾಡಬೇಕು. ಲಗ್ನವಾಗುವ ವರನಿಗೆ ಸರ್ಕಾರದಿಂದ 10 ಸಾವಿರ ರೂ.